# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ,
## ಉತ್ತರಹಳ್ಳಿ ಉಪವಿಭಾಗ, ಬೆಂಗಳೂರು

ಸಂ:ಸ.ಕಾ.ಅ(ಉ)/ಪಿಆರ್/ /2020-21 ದಿನಾಂಕ:03-10-2020

**ದಿನಾಂಕ:03-10-2020ರಂದು ನಡೆದ 184-ಉತ್ತರಹಳ್ಳಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು**

ಮಾನ್ಯ ಆಯುಕ್ತರವರ ಆದೇಶ ದಿನಾಂಕ:21-09-2020 ಆದೇಶ ಸಂ.ಬಿ12(5)ಪಿಆರ್35/20-21ರಂತೆ ಉತ್ತರಹಳ್ಳಿ ವಾರ್ಡ್-184ರ ನೋಡೆಲ್ ಅಧಿಕಾರಿಯಾಗಿ ಶ್ರೀಮತಿ ಚೈತ್ರಾ ಹೊನ್ನಾಪುರ ರವರನ್ನು ನೇಮಿಸಿದ್ದು, ಸದರಿ ಆದೇಶದಲ್ಲಿ ಸೂಚಿಸಿರುವಂತೆ ಸಾರ್ವಜನಿಕ ಕುಂದು ಕೊರತೆಗಳನ್ನು ವಾರ್ಡ್ ಸಮಿತಿಯ ಹಂತದಲ್ಲಿ ನಿವಾರಣೆಗಾಗಿ ವಾರ್ಡ್ ಹಂತದಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಇಂದು ಸದರಿ ವಾರ್ಡ್ ಸಮಿತಿಯ ಸದಸ್ಯರು ಈ ಕೆಳಕಂಡಂತೆ ಇರುತ್ತಾರೆ.

ಅಧ್ಯಕ್ಷರು, ವಾರ್ಡ್ ನೋಡೆಲ್ ಅಧಿಕಾರಿ ಶ್ರೀಮತಿ ಚೈತ್ರಾ ಹೊನ್ನಾಪುರ, ಸಹಾಯಕ ಕಾರ್ಯದರ್ಶಿ ವಾರ್ಡ್‌ನ ಸಹಾಯಕ ಅಭಿಯಂತರರು ಶ್ರೀ ಕುಮಾರ್, ವಾರ್ಡ್‌ನ ಹಿರಿಯ ಆರೋಗ್ಯ ಪರಿವೀಕ್ಷಕನಾದ ಶ್ರೀ ಶಶಿಕುಮಾರ್ ರವರು, ಸದಸ್ಯರುಗಳು ವಾರ್ಡ್ ಪ್ರದೇಶದಲ್ಲಿನ ಸ್ಥಳೀಯ ನಾಗರೀಕ ಕಲ್ಯಾಣ ಸಂಘ ಅಭಿಜ್ಞಾನ ಪೌಂಡೇಶನ್ ಪ್ರತಿನಿಧಿಯಾದ ರಿಶೀಕ್ ರಾಕೇಶ್ ಹಾಗೂ ಮೇಲ್ಕಂಡ ಸದಸ್ಯರುಗಳನ್ನೊಳಗೊಂಡಂತೆ ಉತ್ತರಹಳ್ಳಿ ವಾರ್ಡ್ ಸಮಿತಿಯನ್ನು ರಚಿಸಲಾಗಿದೆ.

## ಸಭೆಗೆ ಹಾಜರಿದ್ದವರು:

| ಕ್ರಸಂ | ಸದಸ್ಯರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀಮತಿ ಚೈತ್ರಾ ಹೊನ್ನಾಪುರ | ಅಧ್ಯಕ್ಷರು, ವಾರ್ಡ್ ನೋಡೆಲ್ ಅಧಿಕಾರಿ | ಹಾಜರಿದ್ದರು |
| 2 | ಶ್ರೀ ಶಶಿಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 3 | ಶ್ರೀ ರಿಶೀಕ್ ರಾಕೇಶ್ | ಅಭಿಜ್ಞಾನ ಪೌಂಡೇಶನ್ ಸ್ಥಳೀಯ ಸಂಘ | ಹಾಜರಿದ್ದರು |
| 4 | ಶ್ರೀಮತಿ ಪ್ರಮೀಳಮ್ಮ | ಹಿರಿಯ ಆರೋಗ್ಯ ಮಹಿಳಾ ಸಹಾಯಕರು | ಹಾಜರಿದ್ದರು |
| 5 | ಶ್ರೀ ಎನ್.ಕೃಷ್ಣಮೂರ್ತಿ | ಮೌಲ್ಯಮಾಪಕರು | ಹಾಜರಿದ್ದರು |
| 6 | ಶ್ರೀ ಮಹೇಶ್ | ಪೋಲೀಸ್ ಪೇದೆ | ಹಾಜರಿದ್ದರು |

**ಸಭೆಯ ನಡುವಳಿಗಳು:**

**ಘನತ್ಯಾಜ್ಯ ನಿರ್ವಹಣೆ ಬಗ್ಗೆ:** ಶ್ರೀ ಶಶಿಕುಮಾರ್ ಹೆಚ್.ಎ, ಹಿರಿಯ ಆರೋಗ್ಯ ಪರಿವೀಕ್ಷಕ ರವರು ಮಾತನಾಡಿ ಪ್ರತಿ ದಿನ ಮನೆ ಮನೆ ತೆರಳಿ ಕಸದ ಬಗ್ಗೆ ತ್ಯಾಜ್ಯವನ್ನು ವಿಂಗಡಿಸಿ ಹಸಿ, ಒಣ ಪ್ರತ್ಯೇಕವಾಗಿ ವಿಂಗಡಿಸಿ ನೀಡಲು ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಿರುವುದಾಗಿ ಮಂಡಿಸಿದರು. ಬ್ಲಾಕ್ ಸ್ಪಾರ್ಟ್‌ನ್ನು ತೆರವುಗೊಳಿಸಿ ರುದ್ರಭೂಮಿ ಹತ್ತಿರ ದಿನಾಂಕ:02-10-2020ರಂದು ಗಾಂಧಿ ಜಯಂತಿ ಪ್ರಯುಕ್ತ ಸ್ವಚ್ಛತೆ ಮಾಡಿ ಅರಿವು ಮೂಡಿಸಿರುವುದಾಗಿ ಹೇಳಿದರು.

5/10

Scanned with CamScanner

ಸುಬ್ರಮಣ್ಯಪುರ ಕೆರೆ ಸುತ್ತಮುತ್ತ ಅಲ್ಲಲ್ಲಿ ಕಂಡುಬರುತ್ತಿದ್ದ ಘನತ್ಯಾಜ್ಯವನ್ನು ತೆರವುಗೊಳಿಸಲಾಯಿತು. ಪ್ರತಿ ನಿತ್ಯ ವಾರ್ಡ್‌ನಲ್ಲಿ ಕಂಡುಬರುವ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ವಾರ್ಡ್ ಮಾರ್ಷಲ್ ರಾತ್ರಿವೇಳೆ ಕಸ ಎಸೆಯುವವರನ್ನು ನಿಯಂತ್ರಿಸಲು ಮಾರ್ಷಲ್‌ಗಳನ್ನು ನಿಯೋಜನೆ ಮಾಡುವ ಅವಶ್ಯಕತೆ ಕಂಡುಬರುತ್ತದೆ. ವಾರ್ಡ್‌ನಲ್ಲಿ ಪ್ರಸ್ತುತ 94 ಜನ ಪೌರ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ಇನ್ನೂ 82 ಜನ ಪೌರ ಕಾರ್ಮಿಕರ ಅವಶ್ಯಕತೆ ಇರುತ್ತದೆ (ಮ್ಯಾಪ್ ಶೀಟಿನ ಅನುಸಾರವಾಗಿ) ಹೊಸದಾಗಿ ನಿಯೋಜನೆಗೊಂಡಿರುವ ನಿತ್ಯಾ ಎಂಟರ್‌ಪ್ರೈಸಸ್ ಗುತ್ತಿಗೆದಾರರು ದಿನಾಂಕ:30-09-2020ರಂದು ವಾಹನ ನಿಲ್ಲಿಸಿರುತ್ತಾರೆ(ವರ್ಕ್ ಆರ್ಡರ್‌ನಲ್ಲಿ ಇರುವಂತೆ) ಅದನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಿರಿಯ ಆರೋಗ್ಯ ಪರಿವೀಕ್ಷಕರು ಪರಿಶೀಲಿಸಿರುತ್ತಾರೆ. ಅದರಲ್ಲಿ 36 ಆಟೋ ಟಿಪ್ಪರ್, 05 ಕ್ಯಾಂಟರ್, ಎಲ್ಲಾ ಪೌರಕಾರ್ಮಿಕರಿಗೆ ಸುರಕ್ಷಿತ ಸಲಕರಣೆಗಳನ್ನು ನೀಡಲಾಗಿರುತ್ತದೆ. 15*40 ಜಾಗದಲ್ಲಿ ಪೌರ ಕಾರ್ಮಿಕರಿಗೆ ವಿಶ್ರಾಂತಿ ಪಡೆಯಲು ಸ್ಥಳ ನೀಡುವಂತೆ ಕಂದಾಯ ಇಲಾಖೆಯವರನ್ನು ಕೇಳಿಕೊಳ್ಳುತ್ತಾರೆ. ಕಂದಾಯ ಇಲಾಖೆಯವರು ಮಾತನಾಡಿ ಪರಿಶೀಲಿಸಿ, ಸ್ಥಳ ಇದ್ದಲ್ಲಿ ನೀಡಲು ಕ್ರಮವಹಿಸಲಾಗುವುದೆಂದು ಚರ್ಚಿಸಲಾಯಿತು.

ಪ್ರತಿ ತಿಂಗಳು 07ನೇ ತಾರೀಖಿನೊಳಗೆ ಪೌರಕಾರ್ಮಿಕರವರ ಖಾತೆಗೆ ವೇತನ ಜಮಾವಣೆ ಆಗುತ್ತಿರುವುದಾಗಿ ತಿಳಿಸಿರುತ್ತಾರೆ. ಖಾಲಿ ಇರುವ ನಿವೇಶನದಲ್ಲಿ ಘನತ್ಯಾಜ್ಯ ವಸ್ತುಗಳನ್ನು ತೆರವುಗೊಳಿಸಲು ಅಧ್ಯಕ್ಷರು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ನಿರ್ದೇಶನ ನೀಡಲಾಯಿತು. ಮನೆಮನೆಗಳಿಂದ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ಹಸಿ ಮತ್ತು ಒಣ ತ್ಯಾಜ್ಯವನ್ನು ವಿಂಗಡಿಸಿ ನೀಡುತ್ತಿರುವ ಬಗ್ಗೆ ಸಂಬಂಧಪಟ್ಟ ಆರೋಗ್ಯಾಧಿಕಾರಿಯವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಸಭೆಯಲ್ಲಿ ಸೂಚಿಸಲಾಯಿತು.

**ಆರೋಗ್ಯ ಇಲಾಖೆ:** ಶ್ರೀಮತಿ ಪ್ರಮೀಳಮ್ಮ.ಬಿ ಹಿರಿಯ ಆರೋಗ್ಯ ಸಹಾಯಕಿ ರವರು ಕೋವಿಡ್-19ಗೆ ಸಂಬಂಧಿಸಿದಂತೆ ವಾರ್ಡ್‌ಗಳಲ್ಲಿ 03 ತಂಡಗಳನ್ನು ರಚಿಸಿ, ಸ್ಥಳಗಳನ್ನು ನಿಗಧಿಪಡಿಸಿ, ರೋಗ ಲಕ್ಷಣಗಳು ಕಂಡುಬರುವವರಿಗೆ ಕೋವಿಡ್-19 ಟೆಸ್ಟ್‌ಗಳನ್ನು ಮಾಡಲಾಗುತ್ತಿದೆ. ಒಂದು ತಂಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, 2ನೇ ತಂಡ ಬಡಾವಣೆಯಲ್ಲಿ ಅಥವಾ ಜನ ನಿಗುಡ ಪ್ರದೇಶದಲ್ಲಿ ತಂಡಗಳನ್ನು ರಚಿಸಿ ಕಾರ್ಯನಿರ್ವಹಿಸುತ್ತಿದೆ. 3ನೇ ತಂಡಗಳನ್ನು ರೋಗ ಕಂಡುಬಂದಿರುವ ಮನೆಗಳಿಗೆ ಭೇಟಿ ನೀಡಿ ಕಾರ್ಯನಿರ್ವಹಿಸುತ್ತಿದೆ. ಪಾಸಿಟಿವ್ ಕಂಡುಬಂದಿರುವ ಹೋಂ ಕ್ವಾರೆಂಟಿನ್‌ನಲ್ಲಿ ಇರುವವರಿಗೆ ಔಷಧಿಯನ್ನು ಸರಬರಾಜು ಮಾಡಲಾಗುತ್ತಿರುತ್ತಾರೆ. ಆರೋಗ್ಯ ಸಿಬ್ಬಂದಿ & ಆಶಾ ಕಾರ್ಯಕರ್ತರು ಒಳಗೊಂಡು ಕೋವಿಡ್-19ಗೆ ಸಂಬಂಧಿಸಿದಂತೆ ಜನ ನಿಗೂಡ ಪ್ರದೇಶದಲ್ಲಿ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. ಪಾಸಿಟಿವ್ ಕಂಡುಬಂದ ಮನೆಯಲ್ಲಿ ಔಷಧಿ ಸಿಂಪಡಣೆ ಮಾಡಲಾಗುತ್ತಿದೆ(ಸ್ಯಾನಿಟೈಸರ್)

ಪಾಸಿಟಿವ್ ಬಂದ ಕೇಸುಗಳಿಗೆ ಔಷಧಿ ನೀಡಲು ಈ ಹಿಂದೆ ಜೆ.ಎಂ.ಎಸ್ ನಿಂದ ಔಷಧಿ ಸರಬರಾಜು ಮಾಡಲಾಗುತ್ತಿದ್ದು, ಬಿಬಿಎಂಪಿಗೆ ಹಸ್ತಾಂತರ ಗೊಂಡಿರುವುದರಿಂದ ಔಷಧಿ ನೀಡಲು ಗೊಂದಲ ಉಂಟಾಗುತ್ತಿರುತ್ತದೆ. ಸದರಿ ವಿಷಯವಾಗಿ ಸಂಬಂಧಪಟ್ಟ ಆರೋಗ್ಯಾಧಿಕಾರಿ ಬೊಮ್ಮನಹಳ್ಳಿ ವಲಯ ರವರ ಗಮನಕ್ಕೆ ತರಲು ಅಧ್ಯಕ್ಷರು ಸಭೆಯಲ್ಲಿ ಸೂಚಿಸಲಾಯಿತು. ಮಾಸ್ಕ್ ಧರಿಸುವ ಬಗ್ಗೆ ವಾಣಿಜ್ಯ ಮಳಿಗೆಗಳಿಗೆ ತೆರಳಿ ಅರಿವು ಮೂಡಿಸುವ ಬಗ್ಗೆ ಪ್ರಸ್ತಾಪಿಸಲಾಯಿತು.

ಕೋವೀಡ್-19 ಸಾಂಕ್ರಮಿಕ ರೋಗ ಹೆಚ್ಚಾಗುತ್ತಿರುವುದರಿಂದ ಆರೋಗ್ಯ ಇಲಾಖೆಗೆ ಕೋವಿಡ್ ಪರೀಕ್ಷೆಗಳನ್ನು ಹೆಚ್ಚಿನ ಮಟ್ಟದಲ್ಲಿ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

3/10

Scanned with CamScanner

**ಪೋಲೀಸ್ ಇಲಾಖೆ:** ಶ್ರೀ ಮಹೇಶ್ ರವರು ಸುಬ್ರಮಣ್ಯಪುರ ಪೋಲೀಸ್ ಠಾಣೆಯವರು ಮಾತನಾಡಿ ಮಾಸ್ಕ್ ಧರಿಸದೇ ಇರುವ ಸಾರ್ವಜನಿಕರಿಗೆ ಈ ಹಿಂದೆ ರೂ.100/- ದಂಡ ಹಾಕಲು ಆದೇಶವಿದ್ದು, ಇತ್ತೀಚೆಗೆ ರೂ.1000/- ದಂಡ ವಸೂಲಾತಿ ಆದೇಶವಾಗಿರುವುದರಿಂದ ಸಾರ್ವಜನಿಕರು ದಂಡ ವಸೂಲಾತಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುತ್ತಾರೆಂದು ವ್ಯಕ್ತಪಡಿಸಿದರು.

ಹಾಗೂ ಸಾರ್ವಜನಿಕರು ರಾತ್ರಿವೇಳೆ ಬಂದು ಕಸ ಎಸೆಯುವುದನ್ನು ತಡೆಯಲು ಆರಕ್ಷಕ ಠಾಣೆ ಸಿಬ್ಬಂದಿಯ ಸಹಾಯ ಪಡೆದು ರಕ್ಷಣಾ ಸಿಬ್ಬಂದಿಯೊಂದಿಗೆ ಚರ್ಚಿಸಿ ಹಾಗೂ ಸ್ಥಳೀಯ ಎನ್.ಜಿ.ಓ ಆದ ಅಭಿಜ್ಞಾನ ಫೌಂಡೇಷನ್ ಸಹಾಯಯೊಂದಿಗೆ ರಸ್ತೆಯಲ್ಲಿ ಕಸ ಬಿಡುವುದನ್ನು ತಡೆಗಟ್ಟಲು ಜಂಟಿಯಾಗಿ ಕಾರ್ಯನಿರ್ವಹಿಸಲು ಸಭೆಯಲ್ಲಿ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆ:** ವಾರ್ಡ್‌ನ ಸಹಾಯಕ ಅಭಿಯಂತರಾದ ಶ್ರೀ ಕುಮಾರ್ ರವರಿಗೆ ಕೋವಿಡ್-19 ಪಾಸಿಟಿವ್ ಆಗಿರುವುದರಿಂದ ಹಾಗೂ ಕಾಮಗಾರಿ ಇಲಾಖೆ ಸಿಬ್ಬಂದಿಗಳು ಸಭೆಗೆ ಹಾಜರಾಗದೇ ಇರುವುದರಿಂದ ಕಾಮಗಾರಿ ಇಲಾಖೆಗೆ ಸಂಬಂಧಿಸಿದ ಕೆಲಸಕಾರ್ಯಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಗಿತ್ತು.

ವಾರ್ಡ್ ಮಟ್ಟದಲ್ಲಿ ರಸ್ತೆ ಗುಂಡಿಬಿದ್ದಿರುವ ಬಗ್ಗೆ ಹಾಗೂ ಕಾಮಗಾರಿಗೆ ಸಂಬಂಧಪಟ್ಟಂತೆ ದೂರುಗಳು ನಿವಾರಿಸಲು ಕಾಮಗಾರಿ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ಸ್ಥಳೀಯ ಸಂಸ್ಥೆ ಅಭಿಜ್ಞಾನ ಫೌಂಡೇಶನ್ ಸದಸ್ಯರಾದ ಶ್ರೀ ರಿಶೀಕ್ ರಾಕೇಶ್ ರವರು ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚಿಸುವಂತೆ ಸಭೆಯಲ್ಲಿ ತಿಳಿಸಿದರು.

**ಕಂದಾಯ ಇಲಾಖೆ:** ತೆರಿಗೆ ವಸೂಲಾತಿ ಇರುವುದರಿಂದ ಬುಧವಾರ ಬೆಳಿಗ್ಗೆಯಿಂದ ತಮ್ಮ ವ್ಯಾಪ್ತಿಗೆ ಬರುವ ಗ್ರಾಮಗಳ ಬಾಕಿ ವಸೂಲಾತಿ ಉಳಿಸಿಕೊಂಡವ ಸುಸ್ಥಿದಾರರಿಗೆ ನೋಟೀಸ್ ಜಾರಿ ಮಾಡಿ, ವಸೂಲಾತಿಗೆ ಕ್ರಮಕೈಗೊಳ್ಳುವುದು ಹಾಗೂ ಕಂದಾಯ ವಸೂಲಿ ಮಾಡುತ್ತಿರುವ ಬಗ್ಗೆ ವಿವರವನ್ನು ನೋಡೆಲ್ ಅಧಿಕಾರಿಯವರಿಗೆ ವರದಿ ನೀಡಲು ಸಭೆಯಲ್ಲಿ ಹಾಜರಿರುವ ಕಂದಾಯ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಸೂಚಿಸಲಾಯಿತು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ, ಪರಿಹರಿಸಲು ಕ್ರಮತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದ್ದರು. ಅಧ್ಯಕ್ಷರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಕಾರ್ಯದರ್ಶಿ
ವಾರ್ಡ್ ನಂ.184 ಉತ್ತರಹಳ್ಳಿ

ಸಹಿ/- 3/10
ಅಧ್ಯಕ್ಷರು
ನೋಡೆಲ್ ಅಧಿಕಾರಿ
ವಾರ್ಡ್ ನಂ.184 ಉತ್ತರಹಳ್ಳಿ

**ಪ್ರತಿಯನ್ನು:**

1. ಮಾನ್ಯ ವಿಶೇಷ ಆಯುಕ್ತರು(ಆಡಳಿತ) ರವರ ಮೂಲಕ ಮಾನ್ಯ ಆಯುಕ್ತರವರ ಗಮನಕ್ಕೆ ತರಲಾಗಿದೆ.
2. ಮಾನ್ಯ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆ ಸಲ್ಲಿಸಿದೆ.
3. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ
4. ವಾರ್ಡ್ ಸಮಿತಿ ಸದಸ್ಯರುಗಳ ಮಾಹಿತಿಗಾಗಿ.
5. ಕಛೇರಿ ಪ್ರತಿ.

Scanned with CamScanner